**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಎಸ್.ಸಿ. ಸಂಖ್ಯೆಃ 51/2017**

ದಿನಾಂಕಃ 14.11.2018
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 18 ಪ್ರಾಸಾ - 15

| | | |
|---|---|---|
| ಹೆಸರು | ಃ | ಶಿವರಾಜು |
| ತಂದೆಯ/ಗಂಡನ ಹೆಸರು | ಃ | ಗೋವಿಂದಯ್ಯ |
| ವಯಸ್ಸು | ಃ | 50 ವರ್ಷ |
| ಉದ್ಯೋಗ | ಃ | ಮೆಕಾನಿಕ್ |
| ವಾಸಸ್ಥಳ | ಃ | ಮುನಿಯಪ್ಪನದೊಡ್ಡಿ |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ 5 ನೇ ಆರೋಪಿ ಮುಜೀಬ್, 6 ನೇ ಆರೋಪಿ ರಾಜು ಮತ್ತು 7 ನೇ ಆರೋಪಿ ಮಲ್ಲೇಶ್ ನನಗೆ ಗೊತ್ತಿಲ್ಲ.

2. ಈ ಪ್ರಕರಣದ ತನಿಖಾಧಿಕಾರಿ ರಮೇಶ್ ನನಗೆ ಗೊತ್ತಿಲ್ಲ. ಸುಮಾರು 2 ವರ್ಷದ ಹಿಂದೆ ಈಗ ನೋಡಿದ ನಿಶಾನೆ ಪಿ 14 ಪಂಚನಾಮೆಗೆ ನಿಶಾನೆ ಪಿ 14(ಬಿ) ರಂತೆ ರುಜುವನ್ನು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ.

3. ನಿಶಾನೆ ಪಿ 14 ದಾಖಲೆಯಲ್ಲಿ ಪೊಲೀಸರು ಏನು ಬರೆದುಕೊಂಡಿದ್ದಾರೆ ಎಂಬುವುದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ

ಸಮಕ್ಷಮದಲ್ಲಿ ಆರೋಪಿ 5 ರಿಂದ 7 ರವರ ವಶದಿಂದ ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ, ಪರಿಶೀಲಿಸಿದೆ. ಈ ಸಾಕ್ಷಿಯ ಸಾಕ್ಷ್ಯವು ತನಿಖಾಧಿಕಾರಿ ಸಂಗ್ರಹಿಸಿದ ಸಾಕ್ಷ್ಯಕ್ಕೆ ವಿರುದ್ಧವಾಗಿ ಕಂಡುಬಂದಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವುದು ನ್ಯಾಯಸಮ್ಮತವಾಗಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

**<u>ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ</u>**

4. ದಿನಾಂಕ 31.01.2017 ರಂದು ಆರೋಪಿ 5 ರಿಂದ 7 ರವರನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದಾಗ ಅವರುಗಳು ಶ್ರೀಮತಿ.ಪ್ರೇಮಾ ರವರ ಮನೆಯನ್ನು ದರೋಡೆ ಮಾಡಿ ಅಲ್ಲಿಂದ ದರೋಡೆ ಮಾಡಿದ್ದ ಆಭರಣಗಳನ್ನು ಮಾರಾಟ ಮಾಡಿ ಬಂದ ಹಣವನ್ನು ಹಂಚಿಕೆಮಾಡಿಕೊಂಡಿದ್ದು, ತಮ್ಮ ಪಾಲಿಗೆ ಬಂದಿದ್ದ ಹಣವನ್ನು ಮತ್ತು ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನ ಮತ್ತು ಮೊಬೈಲ್ ಫೋನ್‌ಗಳನ್ನು ಹಾಜರುಪಡಿಸುವುದಾಗಿ ತಿಳಿಸಿದರು ಎನ್ನುವುದು ಸರಿಯಲ್ಲ.

5. 5ನೇ ಆರೋಪಿ ಮುಜೀಬ್ ಒಂದು ಕಾರ್ಬನ್ ಮೊಬೈಲ್ ಮತ್ತು ತನ್ನ ಪಾಲಿಗೆ ಬಂದಿದ್ದ ಹಣದಲ್ಲಿ ಖರ್ಚು ಮಾಡಿ ಉಳಿದ್ದ ರೂ.2,500/- ಹಣವನ್ನು ಹಾಜರುಪಡಿಸಿದ ಎನ್ನುವುದು ಸರಿಯಲ್ಲ.

6. 6ನೇ ಆರೋಪಿ ತಾನು ಕೃತ್ಯಕ್ಕೆ ಬಳಸಿದ್ದ ಸ್ಟಾರ್ ಸಿಟಿ ಮೋಟಾರ್ ಸೈಕಲ್ ನಂಬರ್ ಕೆಎ-41-ಕ್ಯೂ-2916 ಮತ್ತು ತನ್ನ ಪಾಲಿಗೆ ಬಂದಿದ್ದ ಹಣದಲ್ಲಿ ಖರ್ಚು ಮಾಡಿ ಉಳಿದ ರೂ.2,000/- ವನ್ನು ಹಾಜರುಪಡಿಸಿದ ಎನ್ನುವುದು ಸರಿಯಲ್ಲ.

7. 7ನೇ ಆರೋಪಿ ತನ್ನ ಪಾಲಿಗೆ ಬಂದಿದ್ದ ಖರ್ಚು ಮಾಡಿ ಉಳಿದಿದ್ದ ರೂ.1,500/- ಮತ್ತು ಕೃತ್ಯಕ್ಕೆ ಬಳಸಿದ್ದ ಓಪೋ ಮೊಬೈಲ್‌ನ್ನು ಹಾಜರುಪಡಿಸಿದ ಎನ್ನುವುದು ಸರಿಯಲ್ಲ.

8. ಸದರಿ 3 ಜನ ಆರೋಪಿಗಳಿಂದ ಮೇಲ್ಕಾಣಿಸಿದ ವಸ್ತುಗಳನ್ನು ಪೊಲೀಸರು ಅಮಾನತುಪಡಿಸಿಕೊಂಡು ನಿಶಾನೆ ಪಿ14 ರಂತೆ ಪಂಚನಾಮೆ ಬರೆದು ನನ್ನ ರುಜುವನ್ನು ನಿಶಾನೆ ಪಿ 14(ಬಿ) ರಂತೆ ಪಡೆದುಕೊಂಡರು ಎನ್ನುವುದು ಸರಿಯಲ್ಲ.

9. ಅವುಗಳನ್ನು ಕೂಡ ಪೊಲೀಸರು ನನ್ನ ಸಮಕ್ಷಮದಲ್ಲಿಯೇ ಅಮಾನತು ಪಡಿಸಿಕೊಂಡಿದ್ದರೂ ಕೂಡ ಈಗ ಆರೋಪಿಗಳಿಗೆ ಸಹಾಯ ಮಾಡಲು ಅವರುಗಳಿಂದ ಏನನ್ನೂ ಅಮಾನತು ಪಡಿಸಿಕೊಂಡಿಲ್ಲ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲು:</u> ಶ್ರೀ.ಎಸ್.ಎನ್.ಜಿ. ವಕೀಲರಿಂದ – 5 ಮತ್ತು 6 ನೇ ಆರೋಪಿ ಪರವಾಗಿ:- ಇರುವುದಿಲ್ಲ.**

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.